## II ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ ಬೆಳಗಾವಿ

**O.S.No.** 1318/2012

**DW**-2

**ಪ್ರಮಾಣ ವಚನ ಭೋಧಿಸಿದ ದಿನಾಂಕಃ 12-10-2023.**

ಪಾಟೀ ಸವಾಲು ಪ್ರತಿವಾದಿ 1 ರಿಂದ 4 ರವರಪರ ಶ್ರೀ.NNM ವಕೀಲರಿಂದ.

ನನಗೆ ಇಂಗ್ಲೀಷ್ ಓದಲು ಬರೆಯಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿರುವ ಸಹಿ ನನ್ನದಾಗಿರುತ್ತದೆ. ಈ ದಾವೆಯನ್ನು ನಾವು ಹೂಡಿರುತ್ತೇವೆ. ನಿಮ್ಮ ಅಣ್ಣ ಆನಂದ ಲಕ್ಷ್ಮಣ ಸನದಿರವರು ದಾವೆ ಹೂಡಿರುತ್ತಾರೆ ಎಂದರೆ ಸಾಕ್ಷಿ ಅವರು ಹಾಕಿರುತ್ತಾರೆ ನಾವು ಹಾಕಿರುತ್ತೇವೆ ಎನ್ನುತ್ತಾರೆ. ನಮ್ಮ ತಂದೆಗೆ ಮೂರು ಜನ ಗಂಡು ಮಕ್ಕಳು ಇಬ್ಬರು ಹೆಣ್ಣು ಮಕ್ಕಳು ಎಂದರೆ ಸರಿ. ನಿನ್ನ ಅಣ್ಣ ಆನಂದನ ಜೊತೆ ನನ್ನ ಸಂಬಂಧ ಚನ್ನಾಗಿರುತ್ತದೆಯ ಎಂದರೆ ಸಾಕ್ಷಿ ಚನ್ನಾಗಿರುತ್ತದೆ ಸಾಕ್ಷಿ ಮುಂದುವರೆದು ಎಲ್ಲರೊಂದಿಗೂ ಚನ್ನಾಗಿರುತ್ತದೆ ಎನ್ನುತ್ತಾರೆ. ಈ ದಾವೆ ಹೂಡಿದಾಗಿನಿಂದ ನೀವು 1 ನೇ ಪ್ರತಿವಾದಿಯೊಂದಿಗೆ ಮಾತನಾಡುತ್ತಿರುವುದಿಲ್ಲ ಎಂದರೆ ಸಾಕ್ಷಿ ಮಾತನಾಡುತ್ತಿರುತ್ತೇನೆ ಎನ್ನುತ್ತಾರೆ. ನಮ್ಮ ತಂದೆ 1980 ರಲ್ಲಿ ತೀರಿಕೊಂಡಿರುತ್ತಾರೆ. ನನ್ನ ತಾಯಿ ಜೀವಂತ ಇರುತ್ತಾರೆ. ವಾದಿ ನಮ್ಮ ಕುಟುಂಬಕ್ಕೆ ದೊಡ್ಡ ಅಣ್ಣ ಎಂದರೆ ಸರಿ. ನಾವು ಒಟ್ಟು ಕುಟುಂಬದವರು ಎಂದರೆ ಸರಿ. ಯಾವುದೇ ಆಸ್ತಿ ತೆಗೆದುಕೊಂಡರು ವಾದಿಯ ಹೆಸರಲ್ಲಿ ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿ ದಾವಾ ಸ್ವತ್ತು ಒಂದನ್ನೆ ತೆಗೆದುಕೊಂಡಿರುತ್ತೇವೆ ಎನ್ನುತ್ತಾರೆ. ನನ್ನ ತಂದೆ KEB ಯಲ್ಲಿ ನೌಕರಿಯಲ್ಲಿದ್ದರು ಎಂದರೆ ಸರಿ. ಅವರು ಸೇವೆಯಲ್ಲಿರುವಾಗಿ ತೀರಿಕೊಂಡರು ಎಂದರೆ ಸರಿ. ಅವರ ನೌಕರಿ ವಾದಿ ಆನಂದನಿಗೆ ಸಿಕ್ಕಿರುತ್ತದೆ ಎಂದರೆ ಸರಿ. ಮಲ್ಲಪ್ಪ ಶಾಹಪೂರಕರ ನನ್ನ ಗಂಡ. ನಿಮ್ಮ ಗಂಡ ಮತ್ತು 1 ನೇ ಪ್ರತಿವಾದಿ ಅಣ್ಣಪ್ಪನ ನಡುವೆ ಒಂದು ದಾವೆ ಇತ್ತು ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಸದರಿ ದಾವೆಯಲ್ಲಿ ರಾಜಿಯಾಗಿರುತ್ತದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಏರ್ ಪೋರ್ಟ್ ಆದ ಕಾರಣ ನಿಮ್ಮ ಬಹಳ ಸ್ವತ್ತುಗಳು ಹೋಗಿರುತ್ತವೆ ಎಂದರೆ ಸರಿ. ಸದರಿ ಏರ್ ಪೋರ್ಟಗೆ ನಿಮ್ಮ ಜಮೀನು ಹೋದ ನಂತರ ಬಂದ ಹಣದಿಂದ ಅಜಂ ನಗರದಲ್ಲಿ ವಾದಿ ಪ್ಲಾಟ್ ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. 2006 ರವರೆಗೂ ವಾದಿ ಮತ್ತು ಅವರ ಸಹೋದರರು ಕೂಡಿ ಇದ್ದರು ಎಂದರೆ ಸಾಕ್ಷಿ ಈಗಲು ಸಹ ಕೂಡಿ ಇರುತ್ತಾರೆ ಎನ್ನುತ್ತಾರೆ. ಶಾಂತ ನಮ್ಮ ಅಕ್ಕ ಎಂದರೆ ಸರಿ. ಸದರಿಯವರು ಮದುವೆಯಾಗಿ ಶಿಂದೋಳಿಯಲ್ಲಿರುತ್ತಾರೆ ಎಂದರೆ ಸರಿ. ಸದರಿಯವರು ಮೊದಲು ಶಿಂದೊಳಿಯಲ್ಲಿರುವ ಹಳೆ ಮನೆಯಲ್ಲಿ ಇರುತ್ತಿದ್ದರು ಎಂದರೆ ಸರಿ. ಸದರಿಯವರು ಈಗ ಹೊಸ

ಜಾಗ ತೆಗೆದುಕೊಂಡು ಅಲ್ಲೆ ಇರುತ್ತಾರೆ ಎಂದರೆ ಸರಿ. ಸದರಿ ಜಾಗ ಶಾಂತರವರ ಸ್ವಂತ ಜಾಗ ಎಂದರೆ ಸರಿ. ಸದರಿ ಜಾಗದ ನಂ.33 ಎಂದರೆ ಸರಿ. ನನ್ನ ಅಣ್ಣ ಆನಂದ ಕಾಕತಿಯಲ್ಲಿರುತ್ತಾರೆ ಎಂದರೆ ಸರಿ. ಸದರಿಯವರು ನೌಕರಿ ಮಾಡುತಿದ್ದಾಗಿನಿಂದಲೂ ಅಲ್ಲೆ ಇರುತ್ತಾರೆ ಎಂದರೆ ಸರಿ. ಸದರಿ ಕಾಕತಿಯಲ್ಲಿರುವ ಸ್ವತ್ತು ಒಟ್ಟು ಕುಟುಂಬದ ಸ್ವತ್ತು ಎಂದರೆ ಸಾಕ್ಷಿ ಇಲ್ಲ ಅವರ ಹೆಂಡತಿ ಕಡೆಯಿಂದ ಬಂದ ಸ್ವತ್ತು ಎನ್ನುತ್ತಾರೆ. ಸದರಿ ಸ್ವತ್ತು ನಿಮ್ಮ ತಂದೆ ತೀರಿಕೊಂಡಾಗ ಬಂದ ಹಣದಿಂದ ತೆಗೆದುಕೊಂಡ ಸ್ವತ್ತಾಗಿರುತ್ತದೆ ಎಂದರೆ ಸರಿಯಲ್ಲ. ಸಾಂಬ್ರಾದಲ್ಲಿ ಒಟ್ಟು ಕುಟುಂಬದ ಒಂದು ಮನೆ ಇರುತ್ತದೆ ಎಂದರೆ ಸರಿ. ಸದರಿ ಸ್ವತ್ತಿನ ನಂ.79 ಎಂದರೆ ಸಾಕ್ಷಿ ಮನೆ ನಂಬರು ಗೊತ್ತಿಲ್ಲ. ಸದರಿ ಮನೆ ವಾದಿಯ ಹೆಸರಿನಲ್ಲಿ ಇದೆ ಎಂದರೆ ಸರಿ. ಶಿಂದೋಳಿಯಲ್ಲಿರುವ ದಾವಾ A ಸ್ವತ್ತುಗಳು ವ್ಯವಸಾಯದ ಜಮೀನುಗಳು ಎಂದರೆ ಸರಿ. ಸದರಿ ಸ್ವತ್ತಿನ ಉಳುಮೆಯನ್ನು 1 ನೇ ಪ್ರತಿವಾದಿ ಮಾಡುತ್ತಾನೆ ಎಂದರೆ ಸರಿ. ಸದರಿ ಸ್ವತ್ತನ್ನು 2006 ರಲ್ಲಿ ಖರೀದಿ ಮಾಡಿದ್ದು ಎಂದರೆ ಸಾಕ್ಷಿ 2009 ರಲ್ಲಿ ಎನ್ನುತ್ತಾರೆ. ನಿಮ್ಮ ಎಲ್ಲಾ ಅಣ್ಣ ತಮ್ಮಂದಿರು ಬೇರೆ ಬೇರೆ ವಾಸವಿರುತ್ತಾರೆ ಎಂದರೆ ಸರಿ. ಸುಮಾರ 20 ವರ್ಷಗಳಿಂದ ಅವರು ಬೇರೆ ಬೇರೆ ಮನೆಯಲ್ಲಿರುತ್ತಾರೆ ಎಂದರೆ ಸರಿ. Schedule A ಸ್ವತ್ತು 1 ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ಸದರಿ ಸ್ವತ್ತನ್ನು ಬೇರೆ ವಿಭಾಗವಾದ ನಂತರ ಖರೀದಿ ಮಾಡಿದ ಸ್ವತ್ತು ಎಂದರೆ ಸಾಕ್ಷಿ ನಮ್ಮ ತಂದೆ ತೀರಿಕೊಂಡ ನಂತರ ಬಂದ ಹಣದಲ್ಲಿ ಖರೀದಿ ಮಾಡಿದ ಸ್ವತ್ತು ಎನ್ನುತ್ತಾರೆ. 1980 ರಲ್ಲಿ ನಮ್ಮ ತಂದೆ ತೀರಿಕೊಂಡ ನಂತರ 1988 ರಲ್ಲಿ ನನ್ನ ತಾಯಿಯ ಅಗ್ರೀಮೆಂಟ್ ಮಾಡಿಕೊಂಡಿರುತ್ತಾರೆ ನಂತರ ಖರೀದಿ ಮಾಡಿರುತ್ತಾರೆ ಎನ್ನುತ್ತಾರೆ. 2009 ರಲ್ಲಿ ನನ್ನ ಅಣ್ಣ 1 ನೇ ಪ್ರತಿವಾದಿಯ ಹೆಸರಿನಲ್ಲಿ ಖರೀದಿಯಾಗಿರುತ್ತದೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ನೀಡಲಾಯಿತು. .**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ.**

**Sd/-**

**2 ನೇ ಹೆಚ್ಚುವರಿ ನ್ಯಾಯಾಲಯ ಮತ್ತು**
**ಜೆ ಎಮ್ ಎಫ್ ಸಿ, ಬೆಳಗಾವಿ**